**ಕರ್ನಾಟಕ ಸರ್ಕಾರ**

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,

**ಕೇಂದ್ರೀಕೃತ ದಾಖಲಾತಿ ಘಟಕ, ಕಾವೇರಿ ಭವನದ ಎದುರು, ಕೆ.ಜಿ.ರಸ್ತೆ,**

**ಬೆಂಗಳೂರು-560 009**

ಸಂಖ್ಯೆ:ಸಿಎಸಿ-6/ಡಿ.ಇಡಿ ದಾಖಲಾತಿ/2017-18

ದಿನಾಂಕ: 27-07-2018

## 2018ನೇ ಸಾಲಿನ ಡಿ.ಇಎಲ್.ಇಡಿ / ಡಿ.ಪಿಇಡಿ., ಕೋರ್ಸಿಗೆ ದಾಖಲಾತಿಗಾಗಿ ಅಭ್ಯರ್ಥಿಗಳಿಗೆ ಮುಖ್ಯವಾದ ಸೂಚನೆಗಳು

- 2018-19ನೇ ಸಾಲಿನ ಡಿ.ಇಎಲ್.ಇಡಿ /ಡಿ.ಪಿ.ಇಡಿ ದಾಖಲಾತಿಯ ಸಂಸ್ಥೆಗಳಿಗೆ ಸೀಟು ಹಂಚಿಕೆ ಸಹಿತ ಆಯ್ಕೆಪಟ್ಟಿ ಮತ್ತು ಅಭ್ಯರ್ಥಿಗಳ ಸೂಚನೆಗಳನ್ನು ದಿನಾಂಕ 31-07-2018ರಂದು ಇಲಾಖಾ ವೆಬ್‌ಸೈಟ್‌ನಲ್ಲಿ www.schooleducation.kar.nic.in ಪ್ರಕಟಿಸಲಾಗಿದೆ. ಡಿ.ಇಎಲ್.ಇಡಿ/ಡಿ.ಪಿ.ಇಡಿ ದಾಖಲಾತಿ ಪ್ರಕ್ರಿಯೆಯನ್ನು ರಾಜ್ಯದ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ (ಡಯಟ್), ನಡೆಸಲಾಗುವುದು.
- ಅಭ್ಯರ್ಥಿಗಳು ದಾಖಲಾಗುವ ಸಂದರ್ಭದಲ್ಲಿ ಈ ಕೆಳಕಂಡ ಅಂಶಗಳನ್ನು ಅನುಸರಿಸಲು ತಿಳಿಸಿದೆ.
- ಆಯ್ಕೆಪಟ್ಟಿಯಲ್ಲಿ ಇರುವ ಅಭ್ಯರ್ಥಿಗಳು, ಅರ್ಜಿ ಸಲ್ಲಿಸಿದ್ದ ವ್ಯವಸ್ಥಾಪಕ ಕೇಂದ್ರಗಳಿಗೆ ದಾಖಲಾತಿಗಾಗಿ ಸಂಪರ್ಕಿಸುವುದು. ಅಭ್ಯರ್ಥಿಗಳು ದಾಖಲಾಗುವ ಸಂದರ್ಭದಲ್ಲಿ ಅವರ ಎಲ್ಲಾ ಮೂಲ ದಾಖಲೆಗಳು, ಸಂಬಂಧಪಟ್ಟ ಎಲ್ಲಾ ಪ್ರಮಾಣ ಪತ್ರಗಳು (ಜಾತಿ, ಆದಾಯ, ವ್ಯಾಸಂಗ, ವಿಶೇಷ ಗುಂಪು, ವಿಕಲಚೇತನ ಹಾಗೂ ಇತರೆ) ಮತ್ತು ನಿಮ್ಮ ಹೆಸರಿನ ಮುಂದೆ ಸೂಚಿಸಿದ ನಿಗದಿತ ಶುಲ್ಕವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್‌ನಲ್ಲಿ ಖರೀದಿಸಿದ ಹುಂಡಿ ಸಲ್ಲಿಸುವುದು.
- ದಾಖಲಾತಿಯನ್ನು ದಿನಾಂಕ 31-07-2018 ರಿಂದ 08-08-2018ರವರೆಗೆ ಮಾತ್ರ ನಡೆಸಲಾಗುವುದು.
- ಅಭ್ಯರ್ಥಿಗಳು ಎಸ್.ಬಿ.ಐ, ಬ್ಯಾಂಕ್ ಹುಂಡಿಯನ್ನು **Special Officer, CAC, Bangalore** ರವರ ಹೆಸರಿನಲ್ಲಿ ಕಡ್ಡಾಯವಾಗಿ ಪಡೆದುಕೊಳ್ಳುವುದು.
- ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ವ್ಯವಸ್ಥಾಪಕ ಕೇಂದ್ರದಲ್ಲಿ ಸಂಪರ್ಕಿಸುವುದು.